**<u>ದಿನಾಂಕ 22.01.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>**

1. ನಾನು ಈ ದಿನ ನ್ಯಾಯಾಲಯಕ್ಕೆ ಚಾಸಾ-10 ರವರ ಜೊತೆಯಲ್ಲಿ ಬಂದಿದ್ದೇನೆ ಎಂದರೆ ಸರಿ. ಚಾಸಾ-10 ರವರು ನನ್ನ ಸ್ನೇಹಿತರು. ಮದುವೆಯಾದ ನಂತರ ಚಾಸಾ-1 ಮತ್ತು 1 ನೇ ಆರೋಪಿ ಅನ್ಯೋನ್ಯವಾಗಿದ್ದರು ಎಂದರೆ ಸರಿ. ಚಾಸಾ-10 ರವರು 1ನೇ ಆರೋಪಿ ಮತ್ತು ಚಾಸಾ-1 ರವರ ಮಧ್ಯದ ಗಲಾಟೆಯಾದ ಬಗ್ಗೆ ಪಂಚಯಿತಿ ಮಾಡುವ ಬಗ್ಗೆ ಹೇಳಿದ ದಿನಾಂಕ ನನಗೆ ಗೊತ್ತಿಲ್ಲ. ಗಲಾಟೆಯಾದ ದಿನಾಂಕವನ್ನು ಚಾಸಾ-10 ರವರು ನನಗೆ ಹೇಳಿದ್ದರು, ನನಗೆ ಈಗ ನೆನಪಿಲ್ಲ. ಚಾಸಾ-10 ರವರು ನನಗೆ ಯಾವುದೇ ದಿನಾಂಕ ಹೇಳಿಲ್ಲ ಆದ್ದರಿಂದ ನನಗೆ ದಿನಾಂಕ ನೆನಪಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಯು ಚಾಸಾ-1 ರವರ ಚಾರಿತ್ರ್ಯದ ಬಗ್ಗೆ ಅನುಮಾನ ಇಟ್ಟುಕೊಂಡು ಕಿರುಕುಳ ನೀಡುತ್ತಿರುವುದಾಗಿ ಸಾಕ್ಷ್ಯ ನುಡಿದಿದ್ದು, ಚಾಸಾ-1 ರವರಿಗೆ ಯಾರೊಂದಿಗೆ ಅಕ್ರಮ ಸಂಬಂಧ ಇದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಅದನ್ನು ನನಗೆ ಹೇಳಿರಲಿಲ್ಲ ಎಂದು ಹೇಳುತ್ತಾರೆ. ಚಾಸಾ-1 ಮತ್ತು 10 ರವರು ಹೇಳಿದಂತೆ ಅವರಿಗೆ ಅನುಕೂಲವಾಗುವಂತೆ ಕಟ್ಟು ಕಥೆಯನ್ನು ನ್ಯಾಯಾಲಯದಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ.

2. 1ನೇ ಆರೋಪಿಯು ಚಾಸಾ-1 ರವರಿಗೆ ಹೊಡೆದ ದಿನಾಂಕಗಳು ಗೊತ್ತಿಲ್ಲ. ಪಂಚಯಿತಿ ಆದ ದಿನಾಂಕ ನನಗೆ ನೆನಪಿಲ್ಲ. ಪಂಚಯಿತಿಯು ಅರೆಕಟ್ಟೆ ದೊಡ್ಡಿಯಲ್ಲಿ ಆಗಿತ್ತು. ಸದರಿ ಪಂಚಯಿತಿಯಲ್ಲಿ ಅವರ ಗ್ರಾಮದವರಾದ ಚಂದ್ರಪ್ಪ ಎನ್ನುವವರು ಬಂದಿದ್ದರು. ಆರೋಪಿತರ ತಂದೆ 2ನೇ ಆರೋಪಿಯ ಗಂಡನಿಗೆ ಆಸ್ತಿಯನ್ನು ದಿನಾಂಕ 11/10/2005 ರಂದು ಶುದ್ಧ ಕ್ರಯ ಪತ್ರದ ಮುಖಾಂತರ ಮಾರಾಟ ಮಾಡಿದ ಬಗ್ಗೆ ಚಾಸಾ-1 ರವರು ಆರೋಪಿತರು ಮತ್ತು ಅವರ ಕುಟುಂದವರ ಮೇಲೆ ಗಲಾಟೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ತನ್ನಹೆಸರಿಗೆ ಬರಸಿ ಕೊಡಿ ಎಂದು ಚಾಸಾ-1 ರವರು ಗಲಾಟೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. 1ನೇ ಆರೋಪಿಯು ಚಾಸಾ-1 ರವರ ಚಾರಿತ್ರ ಶಂಖಿಸಿ

ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡುತ್ತಿದ್ದರು ಎಂದು ಚಾಸಾ-10 ರವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ಚಾಸಾ-1 ರವರಿಗೆ ಬುದ್ಧಿವಾದ ಹೇಳಿದ 3 ದಿನಗಳ ನಂತರ 1ನೇ ಆರೋಪಿಯು ಪುನಃ ಚಾಸಾ-1 ರವರಿಗೆ ಹೊಡೆದಿದ್ದ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿಯು ಚಾಸಾ-1 ರವರಿಗೆ ಹೊಡೆದಿದ್ದನ್ನು ನಾನು ನೇರವಾಗಿ ನೋಡಿಲ್ಲ. ಚಾಸಾ-1 ರವರು ಅದರ ಬಗ್ಗೆ ಚಿಕಿತ್ಸೆ ಪಡೆದಿದ್ದೇನೆ ಎಂದು ತಿಳಿಸಿರುತ್ತಾರೆ. 1ನೇ ಆರೋಪಿಯು ಚಾಸಾ-1 ರವರಿಗೆ ಕೆಟ್ಟ ಮಾತುಗಳಿಂದ ಬೈದಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಚಾಸಾ-1 ರವರು ಸಾತನೂರು ಪೊಲೀಸ್ ಠಾಣೆಯಲ್ಲಿ ಸುಳ್ಳು ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. 1ನೇ ಆರೋಪಿಯು ದೇವರಚಿಕ್ಕನಹಳ್ಳಿಯಲ್ಲಿ ಮನೆ ಮಾಡಿದ್ದ ಎಂದು ಚಾಸಾ-1 ರವರು ನನಗೆ ಹೇಳಿದ್ದರು ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. 1ನೇ ಆರೋಪಿಯು ಚಾಸಾ-1 ಮತ್ತು 10 ಹಾಗೂ ಅವರ ಕುಟುಂಬದವರ ಒತ್ತಾಯ ಮೇಲೆ ಬೆಂಗಳೂರಿಗೆ ಬಂದಿದ್ದನು ಎಂದರೆ ಸರಿಯಲ್ಲ. 1ನೇ ಆರೋಪಿಗೆ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. 1ನೇ ಆರೋಪಿಯು ವ್ಯವಸಾಯಬಿಟ್ಟು ಬೇರೆ ಕೆಲಸ ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು 1ನೇ ಆರೋಪಿಯು ರೇಷ್ಮೆ ಹುಳು ಸಾಕಾಣಿಕೆ ಮಾಡುತ್ತಾನೆ ಎಂದು ಹೇಳುತ್ತಾರೆ. ತನಗೆ ವ್ಯವಸಾಯ ಬಿಟ್ಟು ಬೇರೆ ಕೆಲಸ ಗೊತ್ತಿಲ್ಲ, ಓದು ಬರಹ ಬರುವುದಿಲ್ಲ, ಆದ್ದರಿಂದ ಬೆಂಗಳೂರಿಗೆ ಬರುವುದಿಲ್ಲ ಎಂದು ಎಷ್ಟು ಹೇಳಿದರೂ ಸಹ ಆತನನ್ನು ಬೆಂಗಳೂರಿಗೆ ಒತ್ತಾಯ ಪೂರ್ವಕವಾಗಿ ಕರೆದುಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ.

4. ಬೆಂಗಳೂರಿನ ದೇವರಚಿಕ್ಕನಹಳ್ಳಿಯ ಮನೆಯಲ್ಲಿ 1ನೇ ಆರೋಪಿಯು ಚಾಸಾ-1 ರವರನ್ನು ತಳ್ಳಿ ತಾಳಿ ಕಿತ್ತ ದಿನಾಂಕ ನನಗೆ ಗೊತ್ತಿಲ್ಲ. 1 ಮತ್ತು 2ನೇ ಆರೋಪಿತರನ್ನು ಆಸ್ತಿ ವಿಚಾರದಲ್ಲಿ ಹೇಳಿದಂತೆ ಕೇಳುವಂತೆ ಮಾಡಿಕೊಳ್ಳಬೇಕೆಂದು ಚಾಸಾ-10 ರವರು ನನಗೆ ಆತ್ಮೀಯ

ಸ್ನೇಹಿತರಾಗಿರುವುದರಿಂದ, ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)
ಮು.ಮ.ದಂ.ನ್ಯಾ.ಬೆಂ.ನಗರ.